ದಿನಾಂಕಃ 17-12-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ- ಪ್ರತಿವಾದಿ 14 ಮತ್ತು 16 ರ ಪರ ಶ್ರೀ ಎಫಎಸಕೆ ವಕೀಲರಿಂದ

ಈ ದಾವೆಯಲ್ಲಿ ನನಗೆ ಬರೆದುಕೊಟ್ಟಂತಹ ಒಟ್ಟು ಮೊಕ್ತಿಯಾರಪತ್ರದ ವಾದಿ ಹಾಗೂ ನನ್ನ ಊರು ಒಂದೇ ಅಂದರೆ ಸರಿ. ವಾದಿಯು ಮೊದಲನೇ ದರ್ಜೆಯ ಗುತ್ತಿಗೆದಾರರು ಆಗಿರುವರು ಅಂದರೆ ಸರಿ. ಅವರು ರಾಜಕೀಯ ಗಣ್ಯವ್ಯಕ್ತಿ ಆಗಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ವಾದಿಯು ತಾಲೂಕು ಮಟ್ಟ, ಜಿಲ್ಲಾ ಮಟ್ಟ ಹಾಗೂ ಹೊರರಾಜ್ಯಗಳಲ್ಲಿ ಗುತ್ತಿಗೆದಾರಿಕೆಯ ಕೆಲಸಗಳನ್ನು ಮಾಡುತ್ತಿರುವರು ಅಂದರೆ ಸರಿ. ಅವರು ಆರೋಗ್ಯದಿಂದ ಇರುವರು ಅಂದರೆ ಸರಿ. ವಾದಿಗೆ ನ್ಯಾಯಾಲಯದಲ್ಲಿ ಬಂದು ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇರುವುದಿಲ್ಲ ಅಂದರೆ ಸಾಕ್ಷಿ ನುಡಿಯುವುದೆನೆಂದರೆ ಅವರಿಗೆ ಬಹಳ ಕೆಲಸದ ಒತ್ತಡ ಇರುವುದು ಎಂದು ನುಡಿಯುವರು. ನನ್ನ ಹೆಸರಿನಲ್ಲಿ ಒಟ್ಟು ಮೊಕ್ತಿಯಾರಪತ್ರವನ್ನು ದಿಃ 18.08.2018 ರಲ್ಲಿ ಮಾಡಿಕೊಟಿಟರುವರು. ಈ ಒಟ್ಟು ಮೊಕ್ತಿಯಾರಪತ್ರವನ್ನು ನನಗೆ ಈ ದಾವೆಗೆ ಸಂಬಂಧಪಟ್ಟಂತೆ ಮಾತ್ರ ಬರೆದುಕೊಟ್ಟಿರುವರು. ನಾನು ವಾದಿಯನ್ನು ಹೊರತುಪಡಿಸಿ ಬೇರೆಯವರಿಗೆ ಒಟ್ಟು ಮೊಕ್ತಿಯಾರ ನಾತೆಯಿಂದ ಕೆಲಸ ಮಾಡಿರುವುದಿಲ್ಲ.

ನನ್ನ ತಂದೆ ಹಾಗೂ ಪ್ರತಿವಾದಿ 14 ವಿನ ತಂದೆ ಸಹೋದರರು ಅಂದರೆ ಸರಿ. ನನ್ನ ಚಿಕ್ಕಪ್ಪನಾದ ಮಹ್ಮದಗೌಸನಿಗೆ 5 ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು ಅಂದರೆ ಸರಿ. ಅವರೆಂದರೆ ಮೃತ ಅಬ್ದುಲಸತ್ತಾರ, ಮೃತ ಗಣೀಸಾಬ, ಇಮಾಮಹುಸೇನ, ಮೃತ ಬಸೀರಅಹ್ಮದ ಮತ್ತು ಅಬ್ದುಲಖಾದರ ಅಂದರೆ ಸರಿ. ಬಸೀರಅಹ್ಮದ 2015 ನೇ ಸಾಲಿನಲ್ಲಿ ಮೃತಪಟ್ಟಿರುವನು. ದಿಃ 06.04.2018 ರಂದು ಅಬ್ದುಲಗಣೀಸಾಬ ಮೃತಪಟ್ಟಿರುವನು. ದಿಃ 25.08.2017 ರಂದು ಅಬ್ದುಲಸತ್ತಾರ ಮೃತಪಟ್ಟಿರುವನು. ಹಪೀಜಾಬೀ, ಜುಲೇಕಾಬೀ

ಮತ್ತು ಮನ್ಸೂರಾಬೀ ಎಂಬ 3 ಜನ ಹೆಣ್ಣು ಮಕ್ಕಳು ಅಂದರೆ ಸರಿ. 1 ನೇ ಪ್ರತಿವಾದಿ ನನಗೆ ಖಾಸ ತಂಗಿ ಆಗಬೇಕು ಅಂದರೆ ಸರಿ.

ಮಹ್ಮದಗೌಸನ ಮಕ್ಕಳಾದ 5 ಜನ ಗಂಡು ಮಕ್ಕಳು ಹಾಗೂ 3 ಜನ ಹೆಣ್ಣುಮಕ್ಕಳ ಮಧ್ಯೆ ಇಂದಿನವರೆಗೊ ಆಸ್ತಿಯಲ್ಲಿ ಪಾಲುವಿಭಾಗ ಆಗಿರುವುದಿಲ್ಲ ಅಂದರೆ ಸರಿಯಲ್ಲ. ಈ ಹಿಸ್ಸೆದಿಸ್ಸೆ ಮಾಡಿಕೊಂಡಿರುವ ಬಗ್ಗೆ ದಾಖಲಾತಿಯ ಮೇಲೆ ನಾನು ಸಹಿ ಮಾಡಿರುವುದಿಲ್ಲ. ಆದರೆ ಆಗ ನನ್ನ ತಂದೆ ಜೀವಂತವಾಗಿದ್ದರು. ಆ ವಾಟ್ನಿಪತ್ರವನ್ನು ನಾನು ನೋಡಿರುವುದಿಲ್ಲ ಅಂದರೆ ಸರಿ. ಆ ವಾಟ್ನಿಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ ಅಂದರೆ ಸರಿ. ಮಹ್ಮದಗೌಸನ 3 ಜನ ಹೆಣ್ಣು ಮಕ್ಕಳಿಗೆ ಯಾವುದೇ ಆಸ್ತಿಗಳನ್ನು ನೀಡಿರುವುದಿಲ್ಲ ಆದರೆ ಅವರು ಹೆಸರು ದಾಖಲು ಮಾಡಲು ವರದಿಯ ಮೇಲೆ ತಮ್ಮ ಸಹಿಯನ್ನು ಮಾಡಿರುವರು. ಆ ವರದಿಯ ಮೇಲೆ ಸಹಿ ಮಾಡಿರುವುದನ್ನು ನಾನು ನೋಡಿರುವುದಿಲ್ಲ.

ಮಹ್ಮದಗೌಸನ 5 ಜನ ಗಂಡು ಮಕ್ಕಳು ಇವತ್ತಿನವರೆಗೂ ಸಹ ಆಸ್ತಿಯಲ್ಲಿ ಹಿಸ್ಸೆದಿಸ್ಸೆ ಮಾಡಿಕೊಂಡಿರುವುದಿಲ್ಲ ಅಂರದೆ ಸರಿಯಲ್ಲ. ಅವರು ಹಿಸ್ಸೆ ಮಾಡಿಕೊಂಡಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಮಹ್ಮದಗೌಸನ ವಾರಸುದಾರರ ಮಧ್ಯೆದಲ್ಲಿ ಕೇವಲ ಒಂದು ಮನೆ ಇರುವುದು ಅಂದರೆ ಸರಿ ಹಾಗೂ ಒಂದು ಖುಲ್ಲಾ ಜಾಗೆಯು ಸಹ ಇರುವುದು. ಈ ಖುಲ್ಲಾ ಜಾಗೆಯ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಈ ಖುಲ್ಲಾ ಜಾಗೆಯು ಕೇವಲ ಅಬ್ದುಲಖಾದರ ಎಂಬುವನಿಗೆ ಬಂದಿರುವದು. ಮನೆಯಲ್ಲಿ 4 ಜನರಿಗೆ ಬಂದಿರುವುದು. ಈ ಆಸ್ತಿಗಳಲ್ಲಿ ಹಿಸ್ಸೆದಿಸ್ಸೆ ಮಾಡಿಕೊಂಡ ಬಗ್ಗೆ ಯಾವದೇ ದಾಖಲೆಗಳು ಇರುವುದಿಲ್ಲ ಅಂದರೆ ಸರಿಯಲ್ಲ. ಆ ದಾಖಲೆಗಳನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ.

ಮುಂದಿನ ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ ಪಾಟಿ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.